# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 53(67) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ<br>(ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 15.07.2024 |

| ಕ್ರಮ. ಸಂಖ್ಯೆ. | ಪ್ರಶ್ನೆ | ಉತ್ತರ |
|---|---|---|
| ಅ) | ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಪಿ.ಹೆಚ್.ಡಿ ಸೀಟುಗಳನ್ನು ಭರ್ತಿ ಮಾಡುವ ವಿಧಾನದಲ್ಲಿ ಏಕರೂಪತೆಯನ್ನು ತರಲು ಪ್ರೊ. ಎಂ.ಎಸ್. ಸುಭಾಷ್, ವಿಶ್ರಾಂತ ಕುಲಪತಿಗಳು ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ತಜ್ಞರ ಸಮಿತಿ ಸರ್ಕಾರಕ್ಕೆ ವಿಸ್ತೃತವಾದ ವರದಿ ಸಲ್ಲಿಸಿದೆಯೇ; | ಸಲ್ಲಿಸಿದೆ. |
| ಆ) | ಸಲ್ಲಿಸಿದ್ದಲ್ಲಿ, ಸದರಿ ತಜ್ಞರ ಸಮಿತಿಯ ವರದಿಯಲ್ಲಿನ ಪ್ರಮುಖಾಂಶಗಳೇನು; ಸರ್ಕಾರ ವರದಿಯಲ್ಲಿನ ಅಂಶಗಳನ್ನು ಯಾವ ಶೈಕ್ಷಣಿಕ ಸಾಲಿನಿಂದ ಜಾರಿಗೆ ತರಲಿದೆ; (ಈ ಬಗ್ಗೆ ಸಂಪೂರ್ಣ ವಿವರ ನೀಡುವುದು) | ಆಯವ್ಯಯದ ಘೋಷಣೆಯಂತೆ, ಪಿ.ಹೆಚ್.ಡಿ ಸೀಟುಗಳನ್ನು ಭರ್ತಿ ಮಾಡುವ ವಿಧಾನದಲ್ಲಿ ಏಕರೂಪತೆಯನ್ನು ತರಲು ಹಾಗೂ ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳ ಎಲ್ಲಾ ಪಿಹೆಚ್‌ಡಿ ಸೀಟುಗಳಿಗೆ ಹಾಗೂ ಖಾಸಗಿ ವಿಶ್ವವಿದ್ಯಾಲಯಗಳ ಶೇ.40 ಸೀಟುಗಳಿಗೆ 2024-25ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಕೌನ್ಸಿಲಿಂಗ್ ನಡೆಸುವ ಕುರಿತು ಕೆಲವು ಮಾರ್ಗ ಸೂಚಿಗಳನ್ವಯ ಪರಿಶೀಲಿಸಿದ ತಜ್ಞರ ಸಮಿತಿಯು, ಸಾಮಾನ್ಯವಾಗಿ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಅನ್ವಯಿಸುವಂತೆ, Karnataka State Universities Ph.D. Regulations, 2024ರ ಕರಡು ವಿನಿಯಮಗಳನ್ನು ರಚಿಸಿ ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಮಾನ್ಯ ರಾಜ್ಯಪಾಲರ ಅಂಕಿತದೊಂದಿಗೆ ಅಧಿನಿಯಮನಗೊಳ್ಳುವ ಈ |

...2

| | | |
|---|---|---|
| | | ವಿನಿಯಮಗಳನ್ನು ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಸಂಯೋಜಿತ ಕಾಲೇಜುಗಳು, ಸ್ವಾಯತ್ತ ಕಾಲೇಜುಗಳು, ಸರ್ಕಾರಿ ಕಾಲೇಜುಗಳು ಹಾಗೂ ಖಾಸಗಿ ವಿಶ್ವವಿದ್ಯಾಲಯಗಳು ಕಟ್ಟುನಿಟ್ಟಾಗಿ ಅನುಸರಿಸತಕ್ಕದ್ದೆಂದು ತಜ್ಞರ ಸಮಿತಿಯು ಸಲಹೆ ನೀಡಿರುತ್ತದೆ.<br><br>ಆದರೆ, ವಿಶ್ವವಿದ್ಯಾಲಯಗಳ ಹಂತದಲ್ಲಿ ಪ್ರತ್ಯೇಕವಾಗಿ ಪಿಹೆಚ್‌ಡಿ ಕೋರ್ಸಿನ ಪ್ರವೇಶಾತಿ ಪರೀಕ್ಷೆಗಳನ್ನು ನಡೆಸುವ ಬದಲಾಗಿ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ (NET) ಪಡೆದ ಅಂಕಗಳ ಆಧಾರದ ಮೇಲೆ 2024-25ನೇ ಶೈಕ್ಷಣಿಕ ಸಾಲಿನಿಂದ ಪಿಹೆಚ್‌ಡಿ ಪ್ರವೇಶಾತಿಗಳನ್ನು ಮಾಡಿಕೊಳ್ಳುವ ಕಾರ್ಯನೀತಿಯನ್ನು ವಿಶ್ವವಿದ್ಯಾಲಯದ ಧನಸಹಾಯ ಆಯೋಗವು ಜಾರಿಗೆ ತಂದಿರುತ್ತದೆ.<br><br>ಆದರೆ ತಜ್ಞರ ಸಮಿತಿಯು ರಚಿಸಿರುವ ಕರಡು ವಿನಿಯಮಗಳಲ್ಲಿ ರಾಷ್ಟ್ರೀಯ ಅರ್ಹತಾ ಪರೀಕ್ಷೆ (NET) ಜೊತೆಗೆ ರಾಜ್ಯ ಮಟ್ಟದಲ್ಲಿ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರ ಮೇಲೆ ಪಿಹೆಚ್‌ಡಿ ಕೋರ್ಸಿನ ಪ್ರವೇಶಾತಿ ಮಾಡಿಕೊಳ್ಳುವ ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಇದು ಯು.ಜಿ.ಸಿ ಕಾರ್ಯನೀತಿಗೆ ವ್ಯತಿರಕ್ತವಾಗಿದ್ದು, ಪಿಹೆಚ್‌ಡಿ ಕೋರ್ಸಿನ ಪ್ರವೇಶಾತಿಯಲ್ಲಿ ಏಕರೂಪತೆ ತರುವ ಉದ್ದೇಶವನ್ನು ಈಡೇರಿಸುವಂತಾಗುವುದಿಲ್ಲ.<br><br>ಆದುದರಿಂದ, ಪಿ.ಹೆಚ್.ಡಿ ಕೋರ್ಸಿನ ಪ್ರವೇಶಾತಿಗೆ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ (NET) ಪಡೆದ ಅಂಕಗಳನ್ನು ಮಾತ್ರ ಪರಿಗಣಿಸುವ ಕುರಿತು ಪುನರಾವಲೋಕಿಸಿ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಿಂದ ಕರಡು ವಿನಿಯಮಗಳ ಕುರಿತು ಮಾಡಿರುವ ಅವಲೋಕನಗಳ ಬೆಳಕಿನಲ್ಲಿ ಪರಿಶೀಲಿಸಿ ಪರಿಷ್ಕೃತ ವರದಿಯನ್ನು ಸಲ್ಲಿಸಲು ತಜ್ಞರ ಸಮಿತಿಗೆ ತಿಳಿಸಲಾಗಿರುತ್ತದೆ. |

...3

| | | |
|---|---|---|
| **ಇ)** | ವಿಶ್ವವಿದ್ಯಾಲಯಗಳಲ್ಲಿ ಪಿ.ಹೆಚ್.ಡಿ ಸೀಟುಗಳನ್ನು ಭರ್ತಿ ಮಾಡುವ ವಿಧಾನದಲ್ಲಿ ಏಕರೂಪತೆ ತರುವುದರಿಂದ ವಿದ್ಯಾರ್ಥಿಗಳಿಗೆ ಆಗಲಿರುವ ಉಪಯೋಗಗಳೇನು; (ವಿವರ ನೀಡುವುದು) | ವಿಶ್ವವಿದ್ಯಾಲಯಗಳಲ್ಲಿ ಪಿ.ಹೆಚ್.ಡಿ ಸೀಟುಗಳನ್ನು ಭರ್ತಿ ಮಾಡುವ ವಿಧಾನದಲ್ಲಿ ಹಲವು ವಿಶ್ವವಿದ್ಯಾಲಯಗಳು ಪ್ರತ್ಯೇಕ ಪ್ರವೇಶ ಪರೀಕ್ಷೆಗಳನ್ನು ನಡೆಸುತ್ತಿದ್ದು, ಇದರಿಂದ ವಿದ್ಯಾರ್ಥಿಗಳು ಹಲವು ಪರೀಕ್ಷೆಗಳನ್ನು ಎದುರಿಸಬೇಕಾಗಿರುತ್ತದೆ. ಇದರಲ್ಲಿ ಏಕರೂಪತೆ ತರುವುದರಿಂದ, ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಅರ್ಹತಾ ಪರೀಕ್ಷೆ ಒಂದನ್ನು ಮಾತ್ರ ಬರೆಯುವ ಮೂಲಕ ಪ್ರವೇಶ ಪಡೆಯಲು ಸಹಾಯವಾಗುತ್ತದೆ. |
| **ಈ)** | ಸಂಶೋಧನಾ ವಿದ್ಯಾರ್ಥಿಗಳು ಪಿ.ಹೆಚ್.ಡಿ. ಪೂರೈಸಲು ನಿಗದಿಪಡಿಸಿರುವ ಗಡುವು ಏನು: ಮಹಿಳಾ ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರೌಢ ಪ್ರಬಂಧ ಸಲ್ಲಿಸಲು ಕಾಲಮಿತಿಯಲ್ಲಿ ವಿನಾಯಿತಿ ಇದೆಯೇ? (ಸಂಪೂರ್ಣ ವಿವರ ನೀಡುವುದು) | ವಿಶ್ವವಿದ್ಯಾಲಯ ಧನಸಹಾಯ ಆಯೋಗದ University Grants Commission (Minimum Standards and Procedure for Award of Ph.D. Degree) Regulations, 2022ರಲ್ಲಿ ಪಿಹೆಚ್‌ಡಿ ಪೂರೈಸುವ ಕಾಲಾವಧಿಯ ಕುರಿತು ಹಾಗೂ ಕಾಲಾವಧಿಯ ವಿನಾಯಿತಿಯ ಕುರಿತು ಕೆಳಕಂಡಂತೆ ಗೊತ್ತುಪಡಿಸಲಾಗಿದೆ:-<br><br>4. **Duration of the Programme.-** (1) Ph.D. Programme shall be for a minimum duration of three (3) years, including course work, and a maximum duration of six (6) years from the date of admission to the Ph.D. programme.<br>(2) A maximum of an additional two (2) years can be given through a process of re-registration as per the Statute/Ordinance of the Higher Educational Institution concerned; provided, however, that the total period for completion of a Ph.D. programme should not exceed eight (8) years from the date of admission in the Ph.D. programme. |

| | | |
|---|---|---|
| | | Provided further that, female Ph.D. scholars and Persons with Disabilities (having more than 40% disability) may be allowed an additional relaxation of two (2) years; however, the total period for completion of a Ph.D. programme in such cases should not exceed ten (10) years from the date of admission in the Ph.D. programme.<br><br>(3) Female Ph.D. Scholars may be provided Maternity Leave/Child Care Leave for up to 240days in the entire duration of the Ph.D. programme.<br><br>ವಿಶ್ವವಿದ್ಯಾಲಯ ಧನಸಹಾಯ ಆಯೋಗದ University Grants Commission (Minimum Standards and Procedure for Award of Ph.D. Degree) Regulations, 2022ಗಳನ್ನು ಅಳವಡಿಸಿಕೊಂಡು ಉನ್ನತ ಶಿಕ್ಷಣ ಇಲಾಖೆಯಡಿಯ ವಿಶ್ವವಿದ್ಯಾಲಯಗಳಿಂದ ಪಿಹೆಚ್‌ಡಿ ವಿನಿಯಮಗಳನ್ನು ರಚಿಸಿಕೊಂಡು ಅನುಸರಿಸಲಾಗುತ್ತದೆ. |

**ಸಂಖ್ಯೆ: ಇಡಿ/286/ಯುಆರ್ ಸಿ /2024**

(ಡಾ|| ಎಂ.ಸಿ. ಸುಧಾಕರ್)
ಸಚಿವರು, ಉನ್ನತ ಶಿಕ್ಷಣ ಇಲ್ಲಾಖೆ.

ಡಾ.ಎಂ.ಸಿ ಸುಧಾಕರ್ ಎಂ.ಡಿ.
ಉನ್ನತ ಶಿಕ್ಷಣ ಸಚಿವರು